5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 03.09.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 8 ಪಿ. ಡಬ್ಲ್ಯೂ:9

| | |
|---|---|
| ಸಾಕ್ಷಿದಾರರ ಹೆಸರು | ಸಿ. ಎಂ. ಶಿವರಾಜು |
| ತಂದೆಯ ಹೆಸರು | ಲೇಟ್ ಸಿ. ಮಾದಯ್ಯ |
| ವಯಸ್ಸು | 69 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ನೆಟ್ಟಕಲ್ಲು ಗ್ರಾಮ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಸಾಕ್ಷಿಗೆ ನಿಪಿ.11 ಶವ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ.11(ಡಿ) ಎಂದು ಗುರುತಿಸಲಾಯಿತು.
2. ಸದರಿ ನಿಪಿ.11(ಡಿ) ಸಹಿಯನ್ನು ಸುಮಾರು 3 ವರುಷಗಳ ಹಿಂದೆ ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಜೋಗಪ್ಪ ಅಂದರೆ ಸಿದ್ದಯ್ಯ ರವರ ಹೆಂಡತಿ ತೀರಿಕೊಂಡ ವಿಚಾರದಲ್ಲಿ ಶವ ತನಿಖೆಯನ್ನು ಮಾಡುವ ಸಲುವಾಗಿ ನನ್ನ ಸಹಿಯನ್ನು ಪೊಲೀಸರು ಪಡೆದುಕೊಂಡಿದ್ದರು. ಸದರಿ ಸಮಯದಲ್ಲಿ ಮಹದೇವ ಎನ್ನುವವರು ಸಹ ನನ್ನ ಜೊತೆಯಲ್ಲಿ ಇದ್ದರು. ಸುಟ್ಟ ಗಾಯಗಳಿಂದ ಸದರಿ ಆರೋಪಿಯ ಹೆಂಡತಿ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಾಗಿರುತ್ತದೆ. ನೆಟ್ಟಕಲ್ಲು ಗ್ರಾಮದಲ್ಲಿ, ಸದರಿ ಆರೋಪಿಯ ಹೆಂಡತಿಗೆ ಸುಟ್ಟ ಗಾಯಗಳು ಆಗಿತ್ತೆಂದು ನನಗೆ ಗೊತ್ತಾಗಿರುತ್ತದೆ. ಸದರಿ ಆರೋಪಿಯ ಹೆಂಡತಿಗೆ ಎಲ್ಲೆಲ್ಲಿ ಸುಟ್ಟ ಗಾಯಗಳಾಗಿತ್ತೆಂದು ನಾನು ನೋಡಲು ಹೋಗಿಲ್ಲ. ಸದರಿ ಸಮಯದಲ್ಲಿ ವೃತ್ತನಿರೀಕ್ಷಕರು ಸಹ ಇದ್ದರು. ಸದರಿ ಸಮಯದಲ್ಲಿ ಫೋಟೋಗಳನ್ನು ತೆಗೆದುಕೊಂಡಿದ್ದರು. ಸಾಕ್ಷಿಗೆ 4 ಫೋಟೋಗಳನ್ನು ತೋರಿಸಲಾಗಿ, ಸದರಿ ಆರೋಪಿಯ ಹೆಂಡತಿಯ ಶವ, ಅವುಗಳಲ್ಲಿ ಕಾಣಿಸುತ್ತಿದೆ ಎಂದು

ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.20 ರಿಂದ 23 ಎಂದು ಗುರುತಿಸಲಾಯಿತು.

3. ಸದರಿ ಆರೋಪಿಯ ಹೆಂಡತಿಯ ಮೇಲೆ ಸುಟ್ಟ ಗಾಯಗಳಾಗಿರುವುದರಿಂದ, ಆರೋಪಿಯ ಮೇಲೆ ಪ್ರಕರಣ ದಾಖಲಾಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಕೆ ಟಿ ಎಸ್ ವಕೀಲರು, chief defence counsel ರವರಿಂದ ಃ</u>**

4. ಶವ ಪಂಚನಾಮೆಗೆ ಪೊಲೀಸರು ನನಗೆ ಲಿಖಿತ ನೋಟಿಸು ನೀಡಿಲ್ಲ. ನಿಪಿ.11 ರಲ್ಲಿ ಬರೆದಿರುವ ವಿವರಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.